MADAM SPEAKER.—In view of the statement of the Hon. Chief Minister, I withhold my consent to the adjournment motion of Sri M. S. Krishnan. Let us go to the next business now.

## Reported Statement of Minister about Gods

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).—ರಾಜ್ಯದ ಸಚಿವರೊಬ್ಬರು ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ದೇಶದಲ್ಲಿ ದೇವರ ಪಟಗಳನ್ನು ಕಟ್ಟಿ ಗಟಾರಕ್ಕೆ ಹಾಕಿ ಎಂದು ಒಬ್ಬ ಮಂತ್ರಿಗಳು ಹೇಳುತ್ತಾರೆ. ಇದು ಉನ್ನತ ಸ್ಥಾನದಲ್ಲಿ ಇರತಕ್ಕವರು ಹೇಳತಕ್ಕ ಮಾತಲ್ಲ.

ಅಧ್ಯಕ್ಷರು.—ಅವರವರ ಅಭಿಪ್ರಾಯ ಹೇಳಿದರೆ ಏನು?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಬೀದಿಯಲ್ಲಿ ತಿರುಗಾಡುವವರು ಹೇಳಿದ್ದರೆ ನಾನು ಕೇಳುತ್ತಿರಲಿಲ್ಲ. ಇದನ್ನು ಹೇಳಿರುವವರು ರಾಜ್ಯದ ಸಚಿವರು.

ಅಧ್ಯಕ್ಷರು.—ಅವರವರ ಅಭಿಪ್ರಾಯ ಹೇಳುತ್ತಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಒಂದು ಸರ್ಕಾರಕ್ಕೆ ಎರಡು ನೀತಿ ಇದೆಯೇ ?

ಅಧ್ಯಕ್ಷರು.—ಅವರು ಸರ್ಕಾರದ ಪರವಾಗಿ ಹೇಳಿದ್ದಾರೆಯೇ ? ಕ್ಯಾಬಿನೆಟ್‌ನಲ್ಲಿ ಹಾಗೆ ಸೆಟಲ್ ಆಯಿತು ಎಂದು ಹೇಳಿದ್ದಾರೆಯೇ ? ತಾವು ಅದನ್ನೇ ತಿರುಗಿ ತಿರುಗಿ ಹೇಳಿದರೆ ಹೇಗೆ ? ಅವರವರ ಅಭಿಪ್ರಾಯ ಹೇಳಿದ್ದಾರೆ, ನಿಮ್ಮ ಅಭಿಪ್ರಾಯ ಇದ್ದರೆ ನೀವೂ ಹೇಳಿ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇದು ಮಂತ್ರಿಗಳ ಬಾಯಲ್ಲಿ ಬರಬೇಕೆ ? ಸಾಮಾನ್ಯ ಪೋಕರಿ ಹುಡುಗರು ಹೇಳಿದ್ದಾರೆ ಎಂದರೆ ಒಪ್ಪಿಕೊಳ್ಳಬಹುದಿತ್ತು. ಮುಖ್ಯಮಂತ್ರಿಗಳು ಪೋಕರಿ ಹುಡುಗರು ಬಿಡಿ, ಕಿವಿ ಮೇಲೆ ಹಾಕಿಕೊಳ್ಳಬೇಡಿ ಎಂದು ಅವರೇ ಹೇಳಲಿ, ಮಾನ್ಯ ಮಂತ್ರಿಗಳ ಬಗ್ಗೆ ನನಗೆ ಅಚಲವಾದ ಗೌರವ ಇದೆ. ಶ್ರೀ ಪಾಟೀಲ್ ಬಸವಲಿಂಗಪ್ಪನವರು ದೇವರ ಪಟಗಳನ್ನು ಗಟಾರಕ್ಕೆ ಬಿಸಾಡಿ ಎಂದು ಹೇಳಿದ್ದಾರೆ. ಇದು ಉನ್ನತ ಸ್ಥಾನದಲ್ಲಿರತಕ್ಕ ವ್ಯಕ್ತಿಯ ಬಾಯಿಂದ ಬರತಕ್ಕ ಮಾತಲ್ಲ. ನಮ್ಮ ಪಕ್ಷಕ್ಕೆ ಗೌರವ ಇಲ್ಲ, ಇದರ ಬಗ್ಗೆ ಜನ ಪೋಟು ಮಾಡಲ್ಲ ಎಂದು ಹೇಳುತ್ತಾರೆ, ಇನ್ನೊಬ್ಬರು. ಮಾನ್ಯ ಮುಖ್ಯಮಂತ್ರಿಗಳು ಇಲ್ಲದ್ದಾರೆ ಅವರ ಹೆಸರು ಹೆನ್ನಾಗಿ ಇದೆ, ದೇವರಾಜ ಅರಸ್. ಮಾನ್ಯ ಬಸವಲಿಂಗಪ್ಪನವರ ಪ್ರಕಾರ ತಾವೂ ತಮ್ಮ ಹೆಸರನ್ನು ಬದಲಾಯಿಸಬೇಕಾಗುತ್ತದೆ. ಈಗ ನಮ್ಮ ಕೈಯಲ್ಲಿ ಕತ್ತಿ ಕೊಟ್ಟಿರುತ್ತಾರೆ, ಪುಣ್ಯಾತ್ಮರು, ಅವರ ತಲೆ ತೆಗೆಯಿರಿ. ಏತಕ್ಕೆ ಇವನ್ನು ಹೇಳುತ್ತೇನೆಂದರೆ, ನಮ್ಮ ನಾಡು ಚಿನ್ನದ ನಾಡು, ಒಳ್ಳೆಯ ರಾಜ್ಯ. ಮನಸ್ಸಿಗೆ ಬಹಳ ನೋವಾಯಿತು ಎಂದು ಮಂತ್ರಿಗಳು ಒಬ್ಬೊಬ್ಬರು ಒಂದೊಂದು ಹೇಳಿಕೆಯನ್ನು ಕೊಟ್ಟರೆ, ದಯವಿಟ್ಟು ನಿಮ್ಮ ಖಚಿತವಾದ ನಿರ್ಣಯ ಏನು ಎಂಬುದನ್ನು ಹೇಳಿ. ಇದು ಸರ್ಕಾರದ ನಿರ್ಣಯವೇ ? ಅಧ್ಯಕ್ಷರೇ, ಕೆಲವು ಸಮಯದಲ್ಲಿ ನಾವು ಇವರಿಗೆ ಹೂವಿನ ಹಾರಗಳನ್ನು ಹಾಕುತ್ತೇವೆ, ಎಷ್ಟೋ ಕಡೆ ಇವರ ವಿಷಯ ಗೊತ್ತಿಲ್ಲದೆ ಮಂಗಳಾರತಿ, ಕುಂಕುಮ ಹಚ್ಚುತ್ತೇವೆ. ಇದರಿಂದ ದೊಡ್ಡ ಅಪಾಯವಾಗುತ್ತದೆ. ಈ ರೀತಿ ಹೇಳಿಕೆ ಕೊಡುವವರು ಬೀದಿ ಹುಡುಗರಲ್ಲ. ನಿಮ್ಮ ಗೌರವವನ್ನು ರಕ್ಷಿಸಿಕೊಳ್ಳಿ, ಇದು ಸರ್ಕಾರವೇ ? ಎಲ್ಲಿಯಾದರೂ ಇದು ಉಂಟೆ ? ಮನೆಯಲ್ಲಿ ನಮ್ಮ ಮಕ್ಕಳು ಈ ರೀತಿ ಮಾಡಿದರೆ ಮನೆಯಿಂದ ಬಲ ಹೊಡೆದು ಕಳುಹಿಸಿ ಬಿಡುವೆ. ಇದು ಪೋಕರಿ ಜನ ಮಾಡುವ ಕೆಲಸ. ಇವರನ್ನು ನೀವು ಮಂತ್ರಿಮಂಡಲದಲ್ಲಿ ಇಟ್ಟುಕೊಂಡಿದ್ದೀರಿ. ನಾನು ಇದನ್ನು ಲಘುವಾಗಿ ಹೇಳುತ್ತಾ ಇಲ್ಲ. ಮನಸ್ಸಿಗೆ ಬಹಳ ನೋವಾಗಿದೆ. ತರೆ ತರಾಂತರವಿಂದ ದೇವರ ಪೂಜೆ ಮಾಡಿ, ಭಕ್ತಿಯಿಂದ ಬೆಳೆದಂಥ ಜನಾಂಗಕ್ಕೆ ದೇವರ ಪಟ ಬಿಸಾಡಿ ಎಂದು ಹೇಳುತ್ತಾರೆ. ಇದರ ಬಗ್ಗೆ ಸ್ಪಷ್ಟವಾದ ನಿಲುವು ಏನು ಎಂದು ಹೇಳಿ ?

ಶ್ರೀ ಎಂ. ಬಿ. ರಾಮಸ್ವಾಮಿ.—ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು —ಇದರ ಮೇಲೆ ವ್ಯಾಖ್ಯಾನ ನಡೆಯುಬೇಕೆ ?

ಶ್ರೀ ಎಂ. ಬಿ. ರಾಮಸ್ವಾಮಿ.—ತಾವು ಅನುಮತಿ ಕೊಟ್ಟಿದ್ದೀರಿ, ನಿಂತಿದ್ದೇನೆ.

ಅಧ್ಯಕ್ಷರು.—ತಮ್ಮ ಪಾಯಿಂಟ್ ಆಫ್ ಆರ್ಡರ್ ಏನು ಎಂದು ನನಗೆ ಅರ್ಥವಾಗುತ್ತಿಲ್ಲ, ಇದರಲ್ಲಿ ಸರ್ಕಾರದ ಯಾವ ನಿರ್ಣಯವೂ ಇಲ್ಲ ; ಸರ್ಕಾರ ಹಾಗೆ ಆಲೋಚನೆ ಮಾಡಬೇಕು ಎಂದೂ ಹೇಳಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇದರ ಬಗ್ಗೆ ಸರ್ಕಾರದ ನಿರ್ಧಾರವಿಲ್ಲ ಎಂದು ತಾವು ಅಭಿಪ್ರಾಯ ಕೊಡಿಸಿದಿರಿ, ಇನ್ನೊಂದು ವಿಷಯ ಏನೆಂದರೆ, ಈ ಒಂದು ವಿಷಯದ ಬಗ್ಗೆ ಇಬ್ಬರು ಮಂತ್ರಿಗಳು ಕಿತ್ತಾಡಿದರೆ, ಜನಗಳ ಮನಸ್ಸಿನಲ್ಲಿ ಏನು ಅಭಿಪ್ರಾಯ ಬರುತ್ತದೆ ? ಸದನ್ಯರ ಮನಸ್ಸಿನಲ್ಲಿ ಏನು ಅಭಿಪ್ರಾಯ ಬರುತ್ತದೆ? ಮಾನ್ಯ ನಂಜೇಗೌಡರು ಹೇಳಿದ್ದು ಸರಿ ಎಂದು ನಾನು ಹೇಳುವುದಿಲ್ಲ. ದೇವರ ಪಟ ಇರಬೇಕು, ದೇವರು ಇರಬೇಕು ಎಂದು ಆ ರೀತಿ ದೇವರಾಜ ಅರಸ್ ಅವರ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿದ್ದಾರೆಯೇ ? ಮಾನ್ಯ ಬಸವಲಿಂಗಪ್ಪನವರು ಹೇಳಿದ ಹಾಗೆ ದೇವರ ಪಟಗಳನ್ನು ಕಿತ್ತು ಬಿಸಾಡಿರಿ, ಚರಂಡಿಗೆ ಹಾಕಿರಿ ಎಂದು ಅವರು ಹೇಳುತ್ತಾರೆಯೇ ? ಇದರ ಬಗ್ಗೆ ಸ್ಪಷ್ಟವಾದ ವಿಷಯ ಗೊತ್ತಾಗಬೇಕು. ನಮ್ಮ ವಿಷಯ ತಮಗೆ ಗೊತ್ತಿದೆ. ನಾನು ಅದನ್ನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ನಾವು ಇದರಲ್ಲಿ ನಂಬಿಕೆ ಇಟ್ಟುಕೊಂಡ ಜನ ಅಲ್ಲ. ಹಾಗೆ ನೋಡಿದರೆ, ಬಸವಲಿಂಗಪ್ಪನವರು ಹೇಳಿದ್ದನ್ನು ಮೆಚ್ಚಬೇಕು. ಅವರ ಎಷೆಗಾರಿಕೆಯನ್ನು ಮೆಚ್ಚಬೇಕಾಗುತ್ತದೆ. ಸಮಯ ಸಂದರ್ಭ, ಪರಿಸ್ಥಿತಿ ನೋಡಿಕೊಂಡು ಹೇಳಿದ್ದಾರೆಯೋ ಏನೋ ಅದು ಬೇರೆ ವಿಚಾರ. ಮಾನ್ಯ ನಂಜೇಗೌಡರು ಹಳೆಯ ಕಾಲದವರು ಇರಬೇಕು. ಈಗ ನಾವು ಸೋಷಿಯಲಿಂಜಂ ಮಾತನಾಡುತ್ತಿದ್ದೇವೆ. ಈ ವಿಷಯದಲ್ಲಿ ಸರ್ಕಾರದ ಸ್ಪಷ್ಟವಾದ ಅಭಿಪ್ರಾಯ ಏನು ಹೇಳಿದರೆ

ಸಮಗೂ ಸಂತೋಷವಾಗುತ್ತದೆ. ಇವರು ಬಹಿರಂಗವಾಗಿ ಕೆತ್ತಾಡಿದ್ದಾರೆ, ಒಳ ಒಳಗೆ ಪಾರ್ಟಿಯಲ್ಲಿ ಮಾತನಾಡಿದ್ದರೆ, ಪತ್ರಿಕೆಯಲ್ಲಿ ಇದು ವಾರದೆ ಹೋದರೆ ಸುಮ್ಮನೆ ಇರುತ್ತಿದ್ದೆವು. ಇದನ್ನು ಏಕೆ ದೊಡ್ಡ ವಿಷಯ ಮಾಡಿದ್ದಾರೋ ನನಗೆ ಗೊತ್ತಿಲ್ಲ. ಇದು ದೊಡ್ಡ ವಿಷಯವಲ್ಲ.

ಅಧ್ಯಕ್ಷರು.—ಹಾಗಾದರೆ ತಾವು ದಯವಿಟ್ಟು ಕೂತುಕೊಳ್ಳಿ.

ಶ್ರೀ ಡಿ. ದೇವರಾಜ ಅರಸ್.—ಇದರ ಬಗ್ಗೆ ಇಷ್ಟೊಂದು ವ್ಯಾಖ್ಯಾನ ಅನಗತ್ಯ.

ಶ್ರೀ ಬಿ. ಪಟ್ಟಸ್ವಾಮಯ್ಯ.—ಇನ್ನೊಂದು ವಿಷಯ, ಏತಕ್ಕೆ ಇದನ್ನು ಹೇಳಿದೆ ಎಂದರೆ, ನಮ್ಮ ದುಡಿಮೆಯಲ್ಲಿ ಇವರನ್ನು ಮಂತ್ರಿ ಮಾಡಿದ್ದೇವೆ. ನಾವು ಹೊಲ ಉತ್ತು ಇವರಿಗೆ ನಂಬಳ ಕೊಡುತ್ತೇವೆ. ಇವರು ಸಿಕ್ಕ ಸಿಕ್ಕ ಹಾಗೆ ಮಾತನಾಡುವುದಕ್ಕೆ ಇವರನ್ನು ರಾಜ್ಯದಲ್ಲಿ ಇಟ್ಟಿರುವುದು ಅಲ್ಲ, ನಾವಿಗೆ ಹಿಡಿತದಲ್ಲಿಟ್ಟುಕೊಂಡು ಮಾತನಾಡಬೇಕು.

ಶ್ರೀ ಡಿ. ದೇವರಾಜ ಅರಸ್.—ದೇವರ ಫೋಟೋ ಪೂಜೆ ಮಾಡುವುದು ಆಗಲೀ, ಮಾಡದೆ ಇರುವುದಾಗಲೀ, ಸರ್ಕಾರ ಇದರ ಬಗ್ಗೆ ಸ್ಪಷ್ಟವಾದ ತೀರ್ಮಾನ ತೆಗೆದುಕೊಳ್ಳುವ ವಿಚಾರವಲ್ಲ. ದೇವರ ಫೋಟೋ ಪೂಜೆ ಮಾಡಬೇಕು ಮಾಡಬಾರದು ಎಂದು ಸರ್ಕಾರ ಹೇಳುವುದಕ್ಕೆ ಅದು ಕಾನ್‌ಸ್ಟಿಟ್ಯೂಷನ್ ಪ್ರೊಪ್ರೈಟಿ ಅಲ್ಲ, ರೈಟ್ ಆಲ್ಲ. ನಮ್ಮದು ಸೆಕ್ಯೂಲರ್ ಸ್ಟೇಟ್ ಎನ್ನುವುದನ್ನು ಕಾನ್‌ಸ್ಟಿಟ್ಯೂಷನ್‌ನಲ್ಲಿ ಒಪ್ಪಿಕೊಂಡಿದ್ದೇವೆ. ಅಂದರೆ ಜ್ಯಾತ್ಯಾತೀತ ಮತ್ತು ಮತಾತೀತ ರಾಜ್ಯ. ಇಲ್ಲಿ ಮತ ದಿನ್ಯೆ ಮಾಡಿದವರಿಗೂ ಜಾಗವಿದೆ. ಮತ್ತು ಕಟ್ಟಿಕೊಂಡು ಹೋಗುವವರಿಗೂ ಜಾಗವಿದೆ. ಸರ್ಕಾರ ಮಾತ್ರ as a Government and as an Institution, it has nothing to do either with caste or with religion. ನಮ್ಮ ದೇಶದಲ್ಲಿ ವೇದಗಳ ಕಾಲದಿಂದ ನಾಸ್ತಿಕರು ಇದ್ದಾರೆ. ರಾಮಾನುಜಾಚಾರ್ಯರು ಇದ್ದರು, ಮಧ್ವಾಚಾರ್ಯರು ಇದ್ದರು, ಶಂಕರಾಚಾರ್ಯರು ಇದ್ದರು, ಬುದ್ಧ ಮತ್ತು ಮಹಾವೀರರು ಇದ್ದರು, ಮಹಾವೀರರು ಜೈನರ ಸಿದ್ಧಾಂತವನ್ನು ಸ್ಥಾಪನೆ ಮಾಡಿದ ಪುರುಷರು. ಅವರು ಎಲ್ಲಾ ಏಕಕಾಲದಲ್ಲಿ ಬುದ್ಧನ ವೇದಾಂತಗಳೆಲ್ಲಾ ನರಿ, ಆದರೆ ಅವರು ನಾಸ್ತಿಕರು ಎಂದು ಹೇಳಿದರು. ಇದು ಏತಿಯಿಸಂಗೆ ಸಂಬಂಧ ಪಟ್ಟಿದ್ದೆಂದು ದೇಶದಿಂದ ಅವರನ್ನು ಹೊಡೆದು ಅಟ್ಟುವುದಕ್ಕೆ ಸರ್ವ ಪ್ರಯತ್ನ ಮಾಡಿದರು ಮತ್ತು ಹೊರಗಡೆಗೂ ಅಟ್ಟಿದರು.

ಶ್ರೀ ಎಂ. ಎಸ್. ಕೃಷ್ಣನ್.—ಯಾರು ಬುದ್ಧ? ಯಾರು ರಾಮಾನುಜಾಚಾರ್ಯರು ಎಂದು ಕಂಡುಹಿಡಿಯಬೇಕು?

ಶ್ರೀ ಡಿ. ದೇವರಾಜ್ ಅರಸ್. —ರಾಮಾನುಜಾಚಾರ್ಯರು ಯಾರು ಎಂದು ಕಂಡುಹಿಡಿಯಬೇಕಾದರೆ ನಾವು ಹಾಕಿದರೆ ಆಯಿತು.

ಶ್ರೀ ಎಂ. ಎಸ್. ಕೃಷ್ಣನ್.—ಈಗಾಗಲೇ ಅವರು ಎಷ್ಟೋ ಜನಕ್ಕೆ ನಾಮ ಹಾಕಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್.—ಅದುವರಿಂದ ಇವಕ್ಕೆಲ್ಲಾ ನಮ್ಮ ದೇಶದಲ್ಲಿ ಅವಕಾಶವಿದ್ದೇ ಇದೆ. ನಮ್ಮ ದೇಶದಲ್ಲಿ ಯಾರು ಯಾವ ಮತವನ್ನು ಬೇಕಾದರೂ ಪ್ರಚಾರ ಮಾಡಬಹುದು. ಹಿಂದೂ ದೇಶದ ವಿಶಿಷ್ಟ ಗುಣ ಏನೆಂದರೆ ಯಾವ ಮತವೇ ಆಗಲೀ ಅದಕ್ಕೆ ತದ್ವಿರುದ್ಧವಾದ ತತ್ವವನ್ನು ಪ್ರಚಾರ ಮಾಡುವುದಕ್ಕೆ ಅದನ್ನು ಬೆಳೆಸುವುದಕ್ಕೆ ಎಲ್ಲರಿಗೂ ಅವಕಾಶ ಕೊಟ್ಟುಕೊಂಡು ಬಂದಿರುವುದು. ಬೇರೆ ಕಡೆ ರಿಲಿಜಿಯಸ್ ವಾರ್ಸ್ ಆಗಿವೆ. ಯೂರೋಪ್‌ನಲ್ಲಿ 100 ವರ್ಷಗಳ ರಿಲೀಜಿಯಸ್ ವಾರ್ಸ್‌ಗಳು ಆಗಿವೆ. ರೋಮನ್ ಕ್ಯಾತೋಲಿಕ್ಸ್ ಮತ್ತು ಪ್ರಾಟೆಸ್ಟೆಂಟ್ಸ್ ಯುದ್ಧ ಮಾಡಿದ್ದಾರೆ. ಮುಸಲ್ಮಾನರ ಮತದಲ್ಲಿ ಯುದ್ಧಗಳು ನಡೆದಿವೆ. ಹಿಂದೂ ದೇಶದಲ್ಲಿ ಮತೀಯ ಆಧಾರದ ಮೇಲೆ ಯುದ್ಧಗಳು ಆಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಶೋಷಣೆಗಳು ಆಗಿವೆ.

ಶ್ರೀ ಡಿ. ದೇವರಾಜ್ ಅರಸ್.—ಶೋಷಣೆ ಲಕ್ಷೋಪಲಕ್ಷ ವಿಧವಲ್ಲಿ ನಡೆದಿವೆ. ಬನವಲಂಗಪ್ಪನವರು ಬಹುಶಃ ಹರಿಜನರ ಬಗ್ಗೆ ಮಾತನಾಡುವಾಗ ಈ ಶೋಷಣೆಯನ್ನು ಹಿನ್ನೆಲೆಯಲ್ಲಿಟ್ಟುಕೊಂಡು ದೇವರಿಗೆ ಎಷ್ಟು ಪೂಜೆ ಮಾಡಿದರೂ ಅದರಿಂದ ಪ್ರಯೋಜನವಾಗುವುದಿಲ್ಲವೆಂದು ಹೇಳಿರಬಹುದು. ನಾನು ಎಷ್ಟೋ ಬೇಳೆ ಕೇಳಿದ್ದೇನೆ. ಯಾತಕ್ಕೆ ದೇವರಿಗೆ ದೀಪ ಹಚ್ಚಿದರೂ ತಂಗಿನ ಕಾಯಿ ಒಡೆಯುತ್ತಿದ್ದರೂ ಬಡತನ ಹೋಗಿಲ್ಲವೆಂದು. ಹಾಗೆ ಹೇಳುವಾಗ ದೇವರ ಪೂಜೆಯಲ್ಲ ನನಗೆ ನಂಬಿಕೆ ಇಲ್ಲ ಎಂದು ಅಲ್ಲ. ಏನೋ ಒಂದು ಕಾರಣಕ್ಕಾಗಿ ನನಗೆ ನಂಬಿಕೆ ಇದೆ. ಅದರ ಕಡೆ ನನ ಮನಸ್ಸು ಹರಿಯುತ್ತದೆ. ಆದರೆ ಇನ್ನೊಬ್ಬರಿಗೆ ಆ ಕಡೆ ಮನಸ್ಸು ಹರಿಯದೇ ಇರಬಹುದು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾರಮ್ಮನ ಪೂಜೆಯಲ್ಲಿ ಅವರು ಕುರಿ ಕಡಿದು ಪೂಜೆ ಮಾಡಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್.—ಮಾರಿಯಮ್ಮನ ಪೂಜೆಯಲ್ಲಿ ಕುರಿ ಕಡಿಯುತ್ತಾರೆ, ಆದರೆ ಆ ಪಾಪ ಅವರೇ ತೆಗೆದು ಕೊಳ್ಳುತ್ತಾರೆ, ಇವರಿಗೆ ಪೂರ್ತಿ ಪಾಲು ಕೊಡುವುದಿಲ್ಲ, ಹಂಚಿ ಉಳಿದದ್ದು ಬಿಟ್ಟರೆ ಇವರಿಗೆ ಕೊಡುತ್ತಾರೆ. ಆದೇ ಬಂದಿರುವ ಕಷ್ಟ. ಇದು ಮಾರಿಯಮ್ಮನ ಪ್ರಶ್ನೆಯಲ್ಲ. ಅವರು ಯಾವುದೋ ಒಂದು ಸಂದರ್ಭದಲ್ಲಿ ಹೇಳಿರಬಹುದು. ನಾವು ನೀವು ಅಂಬೇಡ್ಕರ್ ಫೋಟೋ ಇಟ್ಟುಕೊಳ್ಳಿ ಎಂದು. ಎಷ್ಟೋ ಜನ ತಿರುಪತಿ ವೆಂಕಟರಮಣಸ್ವಾಮಿ ದೇವಸ್ಥಾನಕ್ಕೆ ಹೋಗಿ ಹುಂಡಿಗೆ ದುಡ್ಡು ಹಾಕುತ್ತಾರೆ. ನಾನು ನೂರಾರು ಕಡೆ ಹೇಳಿದ್ದೇನೆ, ಇಲ್ಲೂ ಹೇಳುತ್ತೇನೆ ಯಾರು ಬ್ಲಾಕ್ ಮಾರ್ಕೆಟಿಯರ್ಸ್ ಇರುತ್ತಾರೋ ಅವರೇ ಹೆಚ್ಚಾಗಿ ಅಲ್ಲಿಗೆ ಹೋಗಿ ದುಡ್ಡು ಹಾಕುವುದು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಂತ್ರಿಗಳು ಯಾರು ಯಾರು ಹೋಗಿದ್ದರು ಎಂದು ಕಂಡು ಹಿಡಿಯುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಮಂತ್ರಿಗಳೂ ಹೋಗಿದ್ದಾರೆ, ನೀವು ಎಲೆಕ್ಷನ್ ಆದಮೇಲೆ ತಿರುಪತಿಗೆ ಹೋಗಿರಲಿಲ್ಲವೇ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಒಳ್ಳೆಯ ಮಂತ್ರಿಮಂಡಲ ಕೊಡಬೇಕೆಂದು ವೆಂಕಟರಮಣ ನನ್ನು ಕೇಳುವುದಕ್ಕೆ ಹೋಗಿದ್ದೆ, ಅತನಿಗೆ ಇನ್ನೂ ದಯೆ ಬರಲಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಅದಕ್ಕೆ ಇನ್ನೊಂದು ಸಲ ಹೋಗಿ ಬಿಟ್ಟು ಬನ್ನಿ, ಕಳುಹಿಸಿ ಕೊಡುತ್ತೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ತಾವು ಮಂತ್ರಿಮಂಡಲ ಬದಲಾವಣೆ ಮಾಡುತ್ತೇವೆಂದು ಹೇಳಿದರೆ ಇಡೋ ಈಗಲೇ ಹೊರಟೆ.

ಶ್ರೀ ಡಿ. ದೇವರಾಜ್ ಅರಸ್.—ಬೇಗನೆ ಬದಲಾವಣೆ ಮಾಡಲಿ ಅಂತ ಕಾಣಿಕೆಯನ್ನು ಹಾಕಿ. ನಾವು ಕಾನ್‌ಸ್ಟಿಟ್ಯೂಷನ್‌ನಲ್ಲಿ ಓತ್ ತೆಗೆದುಕೊಳ್ಳುತ್ತೇವೆ. ಒಂದು ಕಡೆ ಇನ್ ದಿ ನೇಮ್ ಆಫ್ ಗಾಡ್ ಎಂದು ಹೇಳುತ್ತೇವೆ. ಹಾಗೆ ಓತ್ ತೆಗೆದುಕೊಳ್ಳುವುದಕ್ಕೆ ಮನಸ್ಸು ಇಲ್ಲದಿದ್ದರೆ 'ಐ ಅಫರ್ಮ್' ಎಂದು ಹೇಳುವುದಕ್ಕೆ ಅವಕಾಶವಿದೆ. (Whether he is an atheist or whether he is a believer in God) ಆದುದರಿಂದ ಇಬ್ಬರಿಗೂ ಅವಕಾಶವಿದೆ. ಉದಾಹರಣೆಗೆ ರಾಮಕೃಷ್ಣ ಪರಮಹಂಸರು ಹೇಳಿದ್ದಾರೆ, ಫೋಟೋ ಪೂಜೆ ಮಾಡುವವರು ಒಂದು ಮೆಟ್ಟಿಲಲ್ಲಿರುವ ಜನ ಎಂದು. ಮುಸಲ್ಮಾನರು ಪೂಜೆ ಮಾಡುವುದಿಲ್ಲ. ಮಸೀದಿಗೆ ಹೋದರೆ ಅಲ್ಲಿ ಯಾವ ದೇವರ ಫೋಟೋ ಇರುವುದಿಲ್ಲ. ಅವರು ನಮ್ಮನ್ನೇ ಹೋಗಿ ಪ್ರಾರ್ಥನೆ ಮಾಡುತ್ತಾರೆ. ಅವರು ಯೋಗ್ಯತೆಯಲ್ಲಿ ನಮಗಿಂತ ಕಡಿಮೆ ಎಂದು ಹೇಳುವುದಕ್ಕೆ ತಯಾರು ಇಲ್ಲ. ಹಿಂದುಗಳು ದೇವಸ್ಥಾನದಲ್ಲಿ ವಿಗ್ರಹಗಳನ್ನು ಇಡುತ್ತಾರೆ. ಫೋಟೋ ಇಟ್ಟು ಪೂಜೆ ಮಾಡುತ್ತಾರೆ. ನಮಗಿಂತ ಅವರು ಕಡಿಮೆ ಏನೂ ಇಲ್ಲ. ವಿವೇಕಾನಂದರು ವ್ಯಾಖ್ಯಾನ ಇದರ ಬಗ್ಗೆ ಮಾಡಿದ್ದಾರೆ. ಏಕದಂ ಯಾವ ಮನುಷ್ಯ ಬಿ.ಎ. ಡಿಗ್ರಿ ಪಾಸ್ ಮಾಡುವುದಕ್ಕೆ ಆಗುವುದಿಲ್ಲ. ಹಂತ ಹಂತವಾಗಿ ಪ್ರೈಮರಿ ಶಾಲೆ, ಆಮೇಲೆ ಹೈಸ್ಕೂಲ್, ಆಮೇಲೆ ಕಾಲೇಜಿನ ವರೆಗೆ ಹೋಗಬೇಕಾಗುತ್ತದೆ. ದೇವರ ಫೋಟೋ ಇಟ್ಟುಕೊಂಡು ಪೂಜೆ ಮಾಡುವುದು, ವಿಗ್ರಹ ಇಟ್ಟುಕೊಂಡು ಪೂಜೆ ಮಾಡುವುದಕ್ಕೆ ವಿದ್ಯಾಭ್ಯಾಸದಲ್ಲಿ ಪ್ರೈಮರಿ ಸ್ಕೂಲಿನ ಮಟ್ಟಕ್ಕೆ ಇರುವ ಸ್ಥಾನವಿದೆ. 'ಹೈಯೆಸ್ಟ್ ಎವಲ್ಯೂಷನ್ ಇನ್ ಮ್ಯಾನ್' ಉಂಟಾದಾಗ, ಜ್ಞಾನ ಉಂಟಾದಾಗ ದೇವರ ಫೋಟೋ ಇಟ್ಟುಕೊಂಡು ಪೂಜೆ ಮಾಡಬೇಕಾದ್ದು ಇಲ್ಲ, ಫೋಟೋ ಮುಂದೆನ ಧ್ಯಾನ ಮಾಡಬೇಕಾದ್ದು ಇಲ್ಲ. ಆ ಪಂತದಲ್ಲಿರುವವರು ಹಾಗೆ ಮಾಡಬಹುದು. ನಂಜೇಗೌಡರವರು ಫೋಟೋ ಇಟ್ಟುಕೊಂಡು ಪೂಜೆ ಮಾಡಬೇಕೆಂದು ಹೇಳಿದ್ದು ಸರಿಯೇ! ಆದರೆ ಒಂದೇ ಒಂದು ವಿಚಾರ ಏನೆಂದರೆ ಇಂಥ ವಿಚಾರದಲ್ಲಿ ನಾನು ಹೇಳುವುದು ಸರಿ, ಇನ್ನೊಬ್ಬರು ಹೇಳುವುದು ಸರಿಯಲ್ಲ ಎಂದು ಪರಸ್ಪರ ಘರ್ಷಣೆಗೆ ಹೋಗ ತಕ್ಕದಾರಲ್ಲ ಅರ್ಥವಿಲ್ಲ. ಅವರು ಹೇಳುವುದು ಅವರಿಗೆ ಸರಿಯಾಗಿ ಇರಬಹುದು. ದೇವರ ಫೋಟೋ ಬಿಟ್ಟು ಬಿಟ್ಟು ಮನುಷ್ಯನ ಫೋಟೋ ಇಟ್ಟುಕೊಂಡು ಯಾತಕ್ಕೆ ಪೂಜೆ ಮಾಡುತ್ತಾರೆ! ಶಂಕರಾಚಾರ್ಯರ ಪ್ರಕಾರ ಸೋಽಯಂ ಹಂತದಲ್ಲಿ 'ಅಹಂ ಬ್ರಹ್ಮಾಸ್ಮಿ' ಅಂತ ಹೇಳಿದರು ಮನುಷ್ಯ ನಾನು, ನೀವೂ ಎಲ್ಲಾ ದೇವರೇ ಆಗಿದ್ದೇವೆ. ಶಂಕರಾಚಾರ್ಯರ ತತ್ವದ ಪ್ರಕಾರ ಆ ರೀತಿ ಇದೆ. ನಾವು ಅದರ ಮೇಲೆ ವ್ಯಾಖ್ಯಾನ ಮಾಡುವುದಕ್ಕೆ ಶಕ್ತರು ಅಲ್ಲ. ಒಟ್ಟಿನಲ್ಲಿ ನಾವು ತಿಳಿದುಕೊಳ್ಳಬೇಕಾದ್ದು ಇಷ್ಟು. ಅವರು ದೇವರ ಫೋಟೋ ಬೇಡ ಎಂದು ಹೇಳಿದ್ದರಲ್ಲ ನಾವ

ಹಿಡಿಯುವುದಕ್ಕೆ ಆಗುವುದಿಲ್ಲ. ಅದು ಸರ್ಕಾರದ ತೀರ್ಮಾನವಲ್ಲ. ದೇವರ ಫೋಟೋ ಇಟ್ಟು ಕೊಂಡು ಪೂಜೆ ಮಾಡಿದರೆ ತಪ್ಪಿಲ್ಲ. ಅವರು ಯಾತಕ್ಕೆ ಹಾಗೆ ಹೇಳಿದರು ಇವರು ಯಾತಕ್ಕೆ ಹೀಗೆ ಹೇಳಿದರು ಎಂದು ಹೇಳುವುದು ತಪ್ಪು. ಈ ರೀತಿ ವಾದವನ್ನು ಮಾಡಿಕೊಂಡು ಹೋಗುವುದು ಯೋಗ್ಯವಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅದಕ್ಕೆ ಪ್ರಾಶಸ್ತ್ಯ ಹೇಗೆ ಬಂತು ಎಂದರೆ, ಮಂತ್ರಿಗಳಾಗಿ ಅವರು ಹೇಳಿಕೆ ಕೊಟ್ಟುಕೊಂಡು ಹೋದುದರಿಂದ ದೇಶದಲ್ಲಿ ಈ ಒಂದು ವಿಚಾರ ಜನಗಳು ಪ್ರಸ್ತಾಪ ಮಾಡುವ ಹಾಗೆ ಆಯಿತು. ಇದನ್ನು ಸಾರ್ವಜನಿಕರು ಅಗಲೀ ಬೇರೆಯವರು ಆಗಲೀ ಪ್ರಸ್ತಾಪ ಮಾಡಲಿಲ್ಲ. ಮುಖ್ಯ ಮಂತ್ರಿಗಳು ನುಣ್ಣಿ ಹೊಡೆದರು ಅಷ್ಟೆ.

## Lapses on the part of the Executive Engineers

ಶ್ರೀ ಕೆ. ವಿಶ್ವನಾಥ ರೆಡ್ಡಿ.—ಶ್ರೀ ಕೃಷ್ಣಪ್ಪನವರು ಆಹಾರ ಸಮಸ್ಯೆಯ ಬಗ್ಗೆ ಹೇಳಿದರು. ಅದರ ಜೊತೆಗೆ ಇನ್ನೊಂದು ವಿಷಯ ಇದೆ. ಇದನ್ನು ತಮ್ಮ ಮುಖಾಂತರ ಮಂತ್ರಿಮಂಡಲದ ಅವಗಾಹನೆಗೆ ತರುತ್ತೇನೆ. ನಾನು ಬೀದರ್, ಗುಲ್ಬರ್ಗ ಭಾಗದಲ್ಲಿ ಪ್ರವಾಸ ಮಾಡಿಕೊಂಡು ಬಂದಿದ್ದೇನೆ. ಅಲ್ಲಿ ಕೆಲಸ ಸ್ವಲ್ಪ ಮಟ್ಟಿಗೆ ನಡೆದಿದೆ. ಕೆಲವೊಂದು ಕಡೆ ತೀವ್ರತೆಯಿಂದು ನಡೆಯಬೇಕು, ನಡೆದಿಲ್ಲ. 8ನೇ ತಾರೀಖು ಅಫ್ಜಲ್ ಕೃಷ್ಣ ಪ್ರಾಜೆಕ್ಟಿನಲ್ಲಿ 3 ಜನ ಎಕ್ಸಿಕ್ಯೂಟೀವ್ ಇಂಜಿನಿಯರುಗಳು ಇದ್ದರು. ಜವಗಿರ್, ಶಹಾಪುರ ತಾಲ್ಲೂಕುಗಳಲ್ಲಿ ಟನಲ್ ವರ್ಕ್ ಸಂಬಂಧದಲ್ಲಿ 1250 ಜನ ಲೇಬರರ್ಸ್ ಕೆಲಸ ಮಾಡುತ್ತಿದ್ದಾರೆ. ಲೇಬರರ್ಸ್ ಇಲ್ಲ ಎನ್ನುವ ಮಾತು ಸುಳ್ಳು. ಅಲ್ಲಿ ಲೇಬರರ್ಸ್ ಹೋಗಿ ಹಿಂದಕ್ಕೆ ಬರುತ್ತಿದ್ದಾರೆ. ಲೇಬರರ್ಸ್ ಹೋದಾಗ ಉಪಕರಣಗಳೆಲ್ಲ ಎಂದು ಅವರನ್ನು ವಾಪಸ್ ಕಳುಹಿಸುತ್ತಿದ್ದಾರೆ. ಶಹಾಪುರಕ್ಕೆ 150 ಜನ ಹೋಗಿದ್ದರು. ಟೂಲ್ಸ್ ಇಲ್ಲ ಎಂದು ನಾಲ್ಕು ದಿನ ಹಾಗೆ ಕಳೆದಿದ್ದಾರೆ. 4 ದಿನ ಟೂಲ್ಸ್ ಇಲ್ಲ, ಆಹಾರ ಇಲ್ಲ, ಧಾನ್ಯ ಇಲ್ಲ, ವೇಜಸ್ ಇಲ್ಲ, ಎಂದರೆ ಜನರಿಗೆ ಬೇಜಾರು ಬರುತ್ತದೆ. ಅಲ್ಲಿಗೆ ಹೋಗುವುದಕ್ಕೆ ಯಾರೂ ತಯಾರಿಲ್ಲ.

ಎರಡನೆಯದಾಗಿ ಎಕ್ಸಿಕ್ಯೂಟೀವ್ ಇಂಜಿನಿಯರ್ಸ್, ಜೂನಿಯರ್ ಇಂಜಿನಿಯರ್ಸ್ ಮೇಸ್ತ್ರಿಗಳ ಟ್ರೀಟ್‌ಮೆಂಟ್ ಇನ್‌ಹ್ಯೂಮನ್ ಇದೆ. ಪಿ. ಡಬ್ಲ್ಯು. ಡಿ.ಯಲ್ಲಿ ಕೆಲವು ಜನ ಆಫೀಸರ್ಸ್ ಚೆನ್ನಾಗಿ ಕೆಲಸ ಮಾಡುತ್ತಾರೆ. ಜನಗಳ ಕಷ್ಟ ನೋಡಿಕೊಂಡು ನಿಮ್ಮ ಕಷ್ಟ, ನಮ್ಮ ಕಷ್ಟ ಎಂದು ಕೆಲಸ ಮಾಡುತ್ತಿದ್ದಾರೆ. ಅಫ್ಜಲ್ ಕೃಷ್ಣ ಸ್ಕಾಜೆಕ್ಟ್‌ನಲ್ಲಿ ನಂಜುಂಡಯ್ಯ ಎನ್ನುವವರು ಇನ್‌ಹ್ಯೂಮನ್ ಟ್ರೀಟ್‌ಮೆಂಟ್ ಕೊಡುತ್ತಿದ್ದಾರೆ. ಹೈದರಾಬಾದ್ ಕರ್ನಾಟಕದಲ್ಲಿ ಬರಗಾಲ ಪರಿಹಾರ ಕ್ರಿಯಾ ಸಮಿತಿ ಮಾಡಿದ್ದೇವೆ. ಅದರ ಅಧ್ಯಕ್ಷರು ಭೀಮಾರೆಡ್ಡಿ ಎನ್ನುವವರು ನನ್ನ ತಮ್ಮಂದಿರು. ಅವರು ನಂಜುಂಡಯ್ಯನವರ ಹತ್ತಿರ ಸ್ವತಃ ರಿಪ್ರಸೆಂಟೇಷನ್ ಕೊಡಲಿಕ್ಕೆ ಹೋದರೆ, ಲೇಬರರ್ಸ್ ಹೀಗೆ ಹೇಳುವುದು ರೂಢಿಯಲ್ಲಿದೆ, ಏನು ಮಾಡುವುದಕ್ಕಾಗುತ್ತದೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ.

ಮೂರನೆಯದಾಗಿ ಮೆಡಿಕಲ್ ಏಡ್ ಸರಿಯಾಗಿ ಧೋರನಹಳ್ಳಿಯಲ್ಲಿ ಡಾಕ್ಟರ್ ಬಂದು ಔಷಧಿ ಕೊಡುವುದಕ್ಕೆ ತಯಾರಿದ್ದಾರೆ. ಅದಕ್ಕೆ ತಕ್ಕ ಏರ್ಪಾಡು ಮಾಡಿರಿ ಎಂದು ಹೇಳಿದರು. ಆದರೆ ಅವರಿಗೆ ಸರಿಯಾದ ಏರ್ಪಾಡು ಮಾಡುತ್ತಾ ಇಲ್ಲ. ಎಲ್ಲೆಲ್ಲಿ ಲೇಬರ್ ಕಾನ್‌ಸೆಂಟ್ರೇಷನ್ ಇದೆ ಅಲ್ಲಿ ಮೊಬೈಲ್ ಯೂನಿಟ್ಸ್ ಸ್ವತಃ ಹೋಗಿ ನೋಡಿ ಔಷಧಿ ಕೊಡಬೇಕು. 200 ಅಥವಾ 300 ಲೇಬರರ್ಸ್ ಇದ್ದರೆ ಕಲ್ಲಿ ಹೋಗಿ ನೋಡಬೇಕು. ಹೆಣ್ಣು ಮಕ್ಕಳು, ಕೂಲಿ ಮಾಡುತ್ತಿರುತ್ತಾರೆ. ಒಂದು ವರ್ಷದ ಮಗು ಇರುತ್ತದೆ. ಅದಕ್ಕೆ ಖಾಯಿಲೆ ಆದರೆ ಮರದ ಬುಡದಲ್ಲಿ ಬಿಟ್ಟು ಕೆಲಸ ಮಾಡಬೇಕು. ಔಷಧಿ ತರಲು ಬೇರೆ ಕಡೆ ಹೋದರೆ ಒಂದೆರಡು ದಿವಸದ ಕೂಲಿ ಕೊಗುತ್ತದೆ. ಆದುದರಿಂದ ಅಲ್ಲಲ್ಲಿ ಮೊಬೈಲ್ ವ್ಯಾನ್ಸ್ ಹೋಗಬೇಕು. ಧೋರನಹಳ್ಳಿಯಿಂದ ಡಾಕ್ಟರ್ ಹೋಗಿ ಅಲ್ಲಿ ಔಷಧಿ ಕೊಡುವುದಕ್ಕೆ ತಯಾರಿದ್ದಾರೆ. ಆದರೂ ಅವಕ್ಕೆ ನಂಜುಂಡಯ್ಯನವರು ಸರಿಯಾದ ವ್ಯವಸ್ಥೆ ಮಾಡುತ್ತಾ ಇಲ್ಲ. ಅಫ್ಜಲ್ ಕೃಷ್ಣ ಪ್ರಾಜೆಕ್ಟಿನಲ್ಲಿ 3 ಜನ ಎಕ್ಸಿಕ್ಯೂಟೀವ್ ಇಂಜಿನಿಯರ್ಸ್ ಇದ್ದರೂ 1250 ಜನ ಮಾತ್ರ ಕೆಲಸ ಮಾಡುತ್ತಿದ್ದಾರೆ. ಇದು ಬಹಳ ಅವಮಾನಕರವಾದ ವಿಚಾರ. ದಯವಿಟ್ಟು ಇದರ ಕಡೆ ಲಕ್ಷ್ಯ ಕೊಡಿ. ಇಂಥ ಆಫೀಸರ್ಸ್ ಇದ್ದರೆ ಸರ್ಕಾರಕ್ಕೆ ಕೆಟ್ಟ ಹೆಸರು ತರತಕ್ಕಂಥ ಮಾತು. ಅಫ್ಜಲ್ ಕೃಷ್ಣ ಪ್ರಾಜೆಕ್ಟಿನಲ್ಲಿ 8–10 ಸಾವಿರ ಜನ ಕೆಲಸ ಮಾಡತಕ್ಕದ್ದು ಆಗಬೇಕು ಎಂದು ನನ್ನ ನಿವೇದನೆ ಇದೆ.

## Inadequate Medical arrangements at Narayanapur Dam Area

ಶ್ರೀ ಎಂ. ಎಸ್. ಕೃಷ್ಣನ್.—ನಾನು ನೋಡಿದ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ನಾರಾಯಣಪುರ ಡ್ಯಾಂ ಹುಣಸಗಿ ಹತ್ತಿರ 10,000 ಜನ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಡಾಕ್ಟರ್ ಇಲ್ಲ. ವ್ಯಾನ್ ಯಾವಾಗಲೋ ಬರುತ್ತದೆ, ಯಾವಾಗಲೋ ಹೋಗುತ್ತದೆ. ಅಲ್ಲಿ ಔಷಧಿ ಇಲ್ಲ. ಡಾಕ್ಟರಿಗೆ ಒಂದು ಥೇರ್ ಇಲ್ಲ. ಟೇಬಲ್ ಇಲ್ಲ. ಥೇರ್, ಟೇಬಲ್ ಇಲ್ಲದೆ ರೋಗಿಗಳನ್ನು ಹೇಗೆ ನೋಡುವುದು; ಕೆಲಸ ಹೇಗೆ ಮಾಡುವುದು ಎಂದು ಡಾಕ್ಟರ್ ಕಂಪ್ಲೇಂಟ್ ಮಾಡುತ್ತಿದ್ದಾರೆ. ಇದನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಆದರೂ ಇದುವರೆಗೂ ಏನೂ ಮಾಡಿಲ್ಲ ಎಂದು ಹೇಳುತ್ತಾರೆ.

ಇನ್ನೊಂದು ವಿಷಯ. ಕೆಲಸಮಾಡಿದರೂ ಕೂಲಿ ಕೂಡ ಸರಿಯಾಗಿ ಕೊಡುತ್ತಿಲ್ಲ ಎಂದು ಹೇಳಿದ್ದಾರೆ. ಡಿಪಾರ್ಟ್‌ಮೆಂಟಿಗೆ ರೆಫರ್ ಮಾಡಿದರೂ ಇದು ರೆಕ್ಟಿಫೈ ಆಗಿಲ್ಲ. ಏನು ತೊಂದರೆ ಇದೆ ಎಂಬುದನ್ನು ನೋಡಿ, ಗಂಡು ಮಕ್ಕಳು, ಹೆಣ್ಣು ಮಕ್ಕಳಿಗೆ ಸರಿಯಾಗಿ ಕೂಲಿ ಬರುವ ಹಾಗೆ ಮಾಡಬೇಕು.

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಸ್ನೇಹಿತರು ಮೆಡಿಕಲ್ ಏಡ್ ಸರಿಯಾಗಿಲ್ಲ ಎಂದು ಹೇಳಿದರು. 12 ಮೊಬೈಲ್ ಯೂನಿಟ್ಸನ್ನು ಇಟ್ಟಿದ್ದೇವೆ. ಅದು ಕಡಿಮೆಯಾದರೆ ಇನ್ನೂ ಹೆಚ್ಚು ಬೇಕಾದರೆ ಕೊಡುತ್ತೇನೆ. 64 ಫ್ಯಾಮಿನ್ ರಿಲೀಫ್ ಕೆಳಗೆ ಮೂರ ಮೂರುವರೆ ಕೋಟಿ ರೂಪಾಯಿಗಳನ್ನು ಬಡ್ಜೆಟಿನಲ್ಲಿ ಪ್ರೊವೈಡ್ ಮಾಡಿದ್ದೇನೆ. ಈಗಾಗಲೇ ಸಂಬಂಧಪಟ್ಟ ಜಾಯಿಂಟ್ ಡೈರಕ್ಟರನ್ನು ಕಳುಹಿಸಿಕೊಡುತ್ತೇನೆ. ಸರಿಯಾದ ರೀತಿಯಿಂದ ಕೆಲಸಮಾಡದೇ ತೊಂದರೆಯಾಗಿದ್ದರೆ ಜಾಯಿಂಟ್ ಡೈರಕ್ಟರ್ ಅಲ್ಲಿ ಹೋಗಿ ಪರೀಕ್ಷೆ ಮಾಡಿಕೊಂಡು ಯಾವ ರೀತಿ ಏನು ಅನುಕೂಲತೆ ಆಗಬೇಕೋ ಆ ರೀತಿ ಅನುಕೂಲತೆ ಮಾಡಿಕೊಡುತ್ತಾರೆ. Particularly in work spots where the number of labourers is a thousand and more we would like to see that at least one van goes to the spot and some relief is given. If necessary we can even have a temporary relief medical camp. I am directing the concerned Joint Director to go to this spot today.

## Statement of the Chief Minister

### *re*: Lapses on the part of the Executive Engineers

Sri D. DEVARAJ URS (Chief Minister).—Madam, I am glad that the hon. Member Sri Viswanatha Reddy has brought to the notice of that Government certain lapses on the part of the Executive Engineer Sri Nanjundaiah and the short supply of labour at a place between Gogi Tandu and Hosakere tank of Shahapur Taluk. Taking this opportunity, I would like to tell this House that the Government is very anxious to get a large number of labourers on the Upper Krishna, Malaprabha and Ghataprabha projects. I want to make it known through this House to the concerned people in the drought affected areas as well to the representatives coming from those areas that Government is very very anxious to employ a lakh of labourers on these projects. This is in the long run. In the short run it gives employment. Yesterday only I have asked the engineers concerned to see that the work on these projects are made a little more attractive compared to the work near at home viz. the soil conservation work or the minor irrigation work or road work which at the moment is provided closeby to the

village in most of the villages. So much so the villagers, according to my report, have become somewhat reluctant to move in large numbers away from their places and they demand work closeby to their villages. Here, there is one danger which I want this House to realise. Supposing we take up every work in those areas *viz.* major, minor, road etc., it must be remembered that after some time the Government of India is not going to pay us a single paisa for this and I hope the House will agree with me that it is never right on the part of the Government that the work which is incomplete should be left at that stage. Because if we are to continue that work later on, it would require crores and crores of rupees. Where are we to bring that much of money to complete the work in those three or four districts ? Therefore, we should take advantage of the offer made by the Central Government to provide as much money as we can spend on these projects because the work is of a permanent nature. Sooner than later it is going to benefit permanently the regions concerned . Therefore, I appeal through you, Madam Speaker, to the hon. Members, coming from those areas to make propaganda among the village folk to send their people in large numbers to the work spots in these three projects viz. Upper Krishna, Malaphrabha and Ghataprabha. So much so, at the moment I have provision to employ easily 1½ lakhs of people From yesterday's report I learn that we are employing only 50,000. There are three Executive Engineers. We have provided the necessary staff. If we had not provided, the Government would have been blamed that for want of necessary staff the people have not been employed. May be, there are frictions here and there and I cannot vouchsafe that every Government officer high or low, is behaving very well. People going from this area might have felt the heat there and they too might not have properly behaved. I will look into it. There are other reasons, namely, villagers do not want to move from their respective areas. They are hesitant. This is the extraordinary time and they have got to go from their places. I cannot say we can provide work to them in their places for months and months.

2-30 P. M.

Sri M. S. KRISHNAN.—Some people who went to Kalinadi project, have come back.

Sri D. DEVARAJ URS.—They might have come back for other purposes. Even today I am prepared to employ there 10,000 persons.

Sri M. S. KRISHNAN.—The thing is, proper facilities are not provided there.

Sri D. DEVARAJ URS.—They have to go from bylnadu to Malanadu and it is not because proper facilities are not provided that they have come back.

(SRI D. DEVARAJ URS)

Another point was mentioned by the hon. member that necessary equipments like pick-axe, etc, are not provided. That may be a point. I will look into it. Some lacuna might be there. We will see that these things are provided.

Over and above this, I am appealing to you because you are leaders to see that people go there in large numbers. I have to provide for a minimum number of 1.50 lakhs of people. I will give them work. I have also stated that I am going to make the work on these projects a little more attractive. The labour who go to work in these projects will be given some facilities like increase in their wages and also provide them ration on the spot. All these facilities will be given. I appeal to you to see that people come there in large numbers. At the moment there are about 6.80 lakhs of people on the labour roll throughout these regions.

This is the position.

ಶ್ರೀ ಕೆ. ವಿಶ್ವನಾಥ ರೆಡ್ಡಿ.—ಸಾನ್ಯ ಮುಖ್ಯ ಮಂತ್ರಿಗಳು ಈಗ ಏನು ಒಂದು ಮಾತನ್ನು ಹೇಳಿದರು ಅದನ್ನೆಲ್ಲಾ ಸ್ವಾಗತಿಸಿ ಸಾಧ್ಯವಾದಮಟ್ಟಿಗೆ ನಮ್ಮ ಕೋಆಪರೇಷನ್ ಕೂಡ ಕೊಡುತ್ತೇವೆ. ಆದರೆ ಪ್ರಾರಂಭದಲ್ಲೇ ಅವರು ಅಪ್ಪರ್ ಕೃಷ್ಣಾದಲ್ಲಿ ಕೆಲಸ ಸಿಕ್ಕುತ್ತದೆ ಎಂದು ಸಾವಿರಾರು ಜನರು ಹೋದಾಗ ಅವರೆಲ್ಲಾ ಕೆಲಸ ಸಿಕ್ಕದೆ ವಾಪಸ್ಸು ಬಂದರು. ಹೀಗಿರುವಾಗ ಜನರು ಅಲ್ಲಿಗೆ ಹೋದರೆ ಕೆಲಸ ಸಿಕ್ಕುವುದಿಲ್ಲ ಎಂಬ ಭೀತಿ ಬಂದಿರುವುದರಿಂದ ಅವರು ತಮ್ಮ ಸ್ಥಳ ವನ್ನು ಬಿಟ್ಟು ಹೇಗೆ ಹೋಗುವುದಕ್ಕಾಗುತ್ತದೆ? ಎರಡನೆಯದಾಗಿ ಅಲ್ಲಿ ಇದ್ದಂಥ ಆಫೀಸರ್ಸು they are reluctetent to the employees. ಅಲ್ಲಿ ಪೆ.ಲ್ಸಿ ಒಂದು ರೂಪಾಯಿ ಅಥವಾ ಎಂಟು ಆಣೆ ಏನು ತೆಗೆದುಕೊಳ್ಳುತ್ತಾನೋ ಎಂದರ ಬಗ್ಗೆ ಎನ್‌ಕ್ವೈರಿ ಮಾಡಿ ಎಂದು ಹೇಳಿದರೂ ಕೂಡ ಇದಕ್ಕೆ ಸಂಬಂಧಪಟ್ಟ ರಿಲೆಕ್ಷೆಂಟ್ ಆಫೀಸರ್ ಎನ್‌ಕ್ವೈರಿ ಮಾಡದೇ ಇರುವುದಕ್ಕೆ ಕಾರಣ ಏನು?

ಶ್ರೀ ಡಿ. ದೇವರಾಜ ಅರಸ್.—ಸಾವಿರಾರು ಜನ ಕೆಲಸ ಮಾಡುವಂಥಾ ಕಡೆ ಇಂಥವರು ಇರಬಹುದು. ಮತ್ತು ಜನರು ಬರದೇ ಇರುವುದು ಕೂಡ ಒಂದು ಕಾರಣ ಇವೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಕೆಲಸ ಪ್ರಾರಂಭ ಮಾಡುವಾಗ ಅನೇಕ ತೊಂದರೆಗಳು ಬಂದೇ ಬರುತ್ತವೆ. ಅಲ್ಲಿ ಕೆಲಸ ವನ್ನು ನೋಡಿಕೊಳ್ಳುವುದಕ್ಕೆ ಪ್ರಾರಂಭದಲ್ಲಿ ಅಧಿಕಾರಿಗಳನ್ನು ನೇಮಕ ಮಾಡುವುದು ಸ್ವಲ್ಪ ನಿಧಾನವಾಯಿತು. ಆದುದರಿಂದ ಆ ಕಾಲದಲ್ಲಿ ಕೆಲಸಗಾರರು ಹಿಂದಕ್ಕೆ ಹೋಗಿರಬಹುದು. ಆದರೆ ಈಗ ವಸ್ತು ಸ್ಥಿತಿ ಬೇರೆ ಇರಬಹುದು. ತಾವು ಹೇಳಿದ ಹಾಗೆ ಎಸ್ಕಿಂಗ್ ಆಫೀಸರ್ಸ್ ಏನಾದರೂ ಅವರನ್ನು ಬೇಸರದಿಂದ ಕಾಣುವುದಾಗಲಿ ಅಥವಾ ಇಲ್ಲಾ ಕೆಲಸ ಮಾಡಿಸುವುದಾಗಲಿ ಎಂದು ಹೇಳತಕ್ಕಂಥಾದ್ದಾಗಲಿ ತಾವು ಕಾಗದ ಬರೆಯಿರಿ. ತಾವು ಕಾಗದ ಬರೆದರೆ ಆಗಿಂವಾಗ್ಗೆ ನಮಗೆ ವಿಷಯಗಳು ಗೊತ್ತಾಗುತ್ತದೆ. ಏಕಾಏಕಿ ಯಾವುದನ್ನೂ ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಆ ಭಾಗದಿಂದ ಬಂದಿರತಕ್ಕಂಥ ಸದಸ್ಯರು ಕೂಡಲೇ ಕಾಗದ ಬರೆದರೆ ಆ ಬಗ್ಗೆ ನೋಡುವುದಾಗಲಿ, ಅಥವಾ ಕೆಲಸ ಮಾಡಿಸುವುದಾಗಲೀ ಅಥವಾ ಅವರಲ್ಲಿ ಏನಾದರೂ ತಪ್ಪು ಇದ್ದರೆ ಅವರನ್ನು ಕಿತ್ತು ಹಾಕುವುದಾ ಗಲೀ ಮಾಡೋಣ.

ಶ್ರೀ ಬಾಪೂಗೌಡ ರಾಯಪ್ಪ.—ಸ್ವಾಮಿ, ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಕೆಲಸ ನನ್ನ ಜುರಿನಲ್ಲೇ ನಡೆಯುತ್ತಾ ಇವೆ. ಕೇವಲ ಎರಡು ಮೈಲಿ ದೂರದಲ್ಲಿ ಕೆಲಸ ನಡೆಯುತ್ತಾ ಇದೆ. ಅಲ್ಲಿ 800 ಜನ ಕೆಲಸ ಮಾಡುತ್ತಾ ಇದ್ದಾರೆ. ಇದಕ್ಕಾಗಿ ಒಬ್ಬ ಎಗ್ಸಿಕ್ಯೂಟೀವ್ ಇಂಜನೀಯರನ್ನು ಇಟ್ಟಿದ್ದಿರಿ. ಅವರ ನೇತೃತ್ವದಲ್ಲಿ ಈ ಕೆಲಸ ನಡೆಯುತ್ತಾ ಇವೆ. ಅಲ್ಲಿ ಹೆಚ್ಚು ಜನ ಕೂಲಿಗೆ ಏತಕ್ಕೆ ಬರುತ್ತಾ ಇಲ್ಲ ಎಂಬುದಕ್ಕೂ ಕಾರಣ ಕೊಡುತ್ತಾ ಇದ್ದಾರೆ. ಒಂದು ಹೆಣ್ಣಾಳಿಗೆ ಒಂದೂಕಾಲು ರೂಪಾಯಿ ಮತ್ತು ಒಂದು ಗಂಡಾಳಿಗೆ 2 ರೂಪಾಯಿ ಕೂಲಿ ಕೊಡುತ್ತಾ ಇದ್ದಾರೆ. ಮತ್ತು ಆ ಪ್ರದೇಶಕ್ಕೆ ಫುಡ್ ಗ್ರೈನ್ಸ್ ಸರಿಯಾಗಿ ಹೋಗುತ್ತಾ ಇಲ್ಲ. ಈ ತೊಂದರೆ ಇರುವುದ

ರಿಂದ ಅಲ್ಲಿಗೆ ಜನ ಕೋಗುತ್ತಾ ಇಲ್ಲ. ಶ್ರೀಮಾನ್ ಚನ್ನಬಸಪ್ಪನವರು ಮತ್ತು ಶ್ರೀಮಾನ್ ನಂಜೇಗೌಡರು ಅಲ್ಲಿಗೆ ಬಂದಿದ್ದಾಗ ಹೇಳಿದ್ದೇನೆ. ಆದರೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈಪೊತ್ತು ಬಂದಿದೆ. ಅದುದರಿಂದ ಆವರಿಗೆ ಹೆಚ್ಚು ಕೂಲಿ ಕೊಡುವುದಾದರೆ ಹೆಚ್ಚು ಜನ ಬರುವುದಕ್ಕೆ ಅವಕಾಶವಾಗುತ್ತದೆ ಎಂದು ನಾನು ಹೇಳುತ್ತೇನೆ.

**ಅಧ್ಯಕ್ಷರು.**—ಈ ವಿಚಾರದಲ್ಲಿ ಮಾಡುತ್ತೇವೆ ಎಂದು ಹೇಳಿದ್ದಾರಲ್ಲಾ, ಪುನಃ ಪುನಃ ಮತ್ತೇಕೆ ಕೇಳುತ್ತೀರಿ ?

ಶ್ರೀ ಡಿ. ದೇವರಾಜ ಅರಸ್.—ತಮಗೆ ಇನ್ನು ಏನೇನೋ ವಿಚಾರಗಳು ಗೊತ್ತಿರಬಹುದು. ಅದಕ್ಕೆ ನಾನು ಹೇಳುವುದು ಏನೆಂದರೆ ಈಗ ಚೀಫ್ ಇಂಜನಿಯರ್ ಇಲ್ಲೇ ಇದ್ದಾರೆ. ಆವರಿಗೆ ಹೇಳುತ್ತೇನೆ. ಅವರ ಹತಿ ರ ಜೈಂ ತೆಗೆದುಕೊಂಡು ತಮಗೆ ಯಾವ ಯಾವ ತೊಂದರೆಗಳು ಕಂಡು ಬಂದಿದೆಯೋ ಆ ಬಗ್ಗೆ ಅವರನ್ನು ಭೇಟಿ ಮಾಡಿ ಕೇಳಿ. ಅವರಿಗೆ ಹೇಳಿ ನಾನು ಕಳುಹಿಸಿ ಕೊಡುತ್ತೇನೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕೆಲಸ ನಡೆಯುವಾಗ ಪ್ರತಿ ದಿವಸ ಏನಾದರೂ ಅಡಚಣೆಗಳು, ತೊಂದರೆಗಳು ಇದ್ದೇ ಇರುತ್ತದೆ. ಈಪೊತ್ತೇ ಅದನ್ನು ಬಗೆಹರಿಸಿಬಿಡ್ತೇವೆ ಎಂದು ಹೇಳಿದರೆ ತಪ್ಪಾಗುತ್ತದೆ. ಮಧ್ಯೆ ಮಧ್ಯೆ ತೊಂದರೆಗಳು, ಅಡಚಣೆಗಳು, ಬಂದೇ ಬರುತ್ತದೆ. ಅಂಥ ವಿಷಯಗಳು ನನ್ನ ಗಮನಕ್ಕೆ ಬಂದರೆ ಅದಕ್ಕೆ ಕೂಡಲೇ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬಹುದು. ನನ್ನ ಕಾತುರತೆ ಏನು ಇದೆ ಎಂದರೆ ಈಪೊತ್ತು ಆ ಪಾಜೆಕ್ಟ್ ಕೆಲಸಕ್ಕೆ ಕನಿಷ್ಟ ಪಕ್ಷ 1½ ಲಕ್ಷ ಜನ ಆದರೂ ಅಲ್ಲಿಗೆ ಹೆಚ್ಚಬೇಕು ಎನ್ನುವ ಉದ್ದೇಶ ಇದೆ. ಅಷ್ಟು ಜನಕ್ಕೂ ಕೆಲಸ ಕೊಡುವ ಸಾಧ್ಯತೆ ಮಾಡಿಕೊಂಡಿದ್ದೇವೆ. ಇದಕ್ಕೆ ನಿಮ್ಮ ಸಹಕಾರವೂ ಬೇಕು ಎಂದು ಹೇಳುತ್ತೇನೆ. ಚೀಫ್ ಇಂಜಿನಿಯರ್ ಇಲ್ಲೇ ಇದ್ದಾರೆ. ಅವರನ್ನು ಭೇಟಿ ಮಾಡಿ ಆ ಬಗ್ಗೆ ವಿವರಗಳನ್ನು ಹೇಳಿದರೆ ಅದನ್ನು ಕೂಡಲೇ ಕಾರ್ಯಗತ ಮಾಡುವುದಕ್ಕೆ ಏರ್ಪಾಡು ಮಾಡುತ್ತೇನೆ.

## Muslim league leaders on the eve of visit of the Prime-Minister to Srirangapatna

ಶ್ರೀ ಕೋಣಂದೂರು ಲಿಂಗಪ್ಪ.—ಅಧ್ಯಕ್ಷರೆ, ಪ್ರಧಾನಮಂತ್ರಿಗಳು ಶ್ರೀರಂಗಪಟ್ಟಣಕ್ಕೆ ಬಂದಾಗ ಮತ ಪ್ರದರ್ಶನ ನಡೆಯಬಾರದೆಂದು ಮೊದಲೇ ಮುಸ್ಲಿಂ ಲೀಗ್ ನಾಯಕರನ್ನು ಬಂಧಿಸಿಟ್ಟಿದ್ದರು. ಆದುದರಿಂದ ಈ ವಿಚಾರದಲ್ಲಿ ನಾನು ಕೇಳುವುದು ಏನೆಂದರೆ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಶಾಂತಿಯುತವಾದ ಮತಪ್ರದರ್ಶನ ಮಾಡುವುದಕ್ಕೆ ಅವಕಾಶ ಇದೆಯೇ ಇಲ್ಲವೇ ?

**ಅಧ್ಯಕ್ಷರು.**—ಇದು ಅಡ್ಮಿನಿಸ್ಟ್ರೇಷನ್ ಮತ್ತು ಲಾ ಅಂಡ ಆರ್ಡರ್ ಪ್ರಶ್ನೆಯಾಗುವುದರಿಂದ ಅನುಮತಿ ಕೊಡುವುದಕ್ಕಾಗುವುದಿಲ್ಲವೆಂದು ಜವಾಬು ಕಳಹಿಸಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಏನ್ಲದರ್ಲಿಯೂ ಲಾ ಅಂಡ್ ಆರ್ಡರ್ ಮತ್ತು ಅಡ್ಮಿನಿಸ್ಟ್ರೇಷನ್ ಪ್ರಶ್ನೆ ಬಂದೇ ಬರುತ್ತದೆ. ನಾಳೆಯ ದಿವಸ ನಮ್ಮನ್ನೂ ಬಂಧಿಸಿದಬಹುದು. ಅವರ ನೀತಿ ಸರಿಯಲ್ಲವೆಂದು ಅದರ ವಿರುದ್ಧ ಪ್ರದರ್ಶನ ಮಾಡುವುದಕ್ಕೆ, ಶಾಂತಿಯುತ ಪ್ರದರ್ಶನ ನಡೆಸುವುದಕ್ಕೆ ಸಂಪೂರ್ಣ ಅಧಿಕಾರ, ಸ್ವಾತಂತ್ರ್ಯ ಇರಬೇಕು. ಅದನ್ನು ದಮನ ಮಾಡುತ್ತೇವೆಂದು ಸರ್ವಾಧಿಕಾರಿಯಂತೆ ವರ್ತಿಸುವುದು ಇಂದಿರಾ ಗಾಂಧೀಜಿಯವರ ನೀತಿಯಾಗಿದೆ ಎಂದು ಕರೆಯುದೆ ಇದ್ದರೂ ಶ್ರೀ ದೇವರಾಜ ಅರಸ್ ಅವರ ನೀತಿಯಾಗಿದೆ. ಪ್ರಜಾಪ್ರಭುತ್ವವಾದವನ್ನು ದಮನ ಮಾಡುವ ನೀತಿಯನ್ನು ಅನುಸರಿಸಿಕೊಂಡು ಬಂದಿರುವುದರಿಂದ ಪ್ರಜಾಪ್ರಭುತ್ವದ ಅಳಿವು, ಉಳಿವು ಪ್ರಶ್ನೆ ಉದ್ಭವವಾಗುತ್ತದೆ. ಪ್ರಜಾಪ್ರಭುತ್ವ ಅಪಾಯದಲ್ಲಿದೆ. ಇಂಥ ರೀತಿನೀತಿಯನ್ನು ಅನುಸರಿಸಬಾರದು, ಅವರು ಮಾಡಿದ್ದು ತಪ್ಪು, ಆ ನಾಯಕರನ್ನು ಬಂಧಿಸಿ ಇಡುವಾರದಾಗಿತ್ತು ಎಂದು ನನ್ನ ಅಭಿಪ್ರಾಯ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೆಂದು ಕೇಳುತ್ತೇನೆ.

**ಅಧ್ಯಕ್ಷರು.**—ಸರ್ಕಾರ ವಿವರಣೆ ಕೊಡುವುದಕ್ಕೆ ನನ್ನ ಅನುಮತಿ ಇಲ್ಲ. ನಾನು ಈ ವಿಚಾರ ಪ್ರಸ್ತಾಪ ಮಾಡುವುದಕ್ಕೆ ನನ್ನ ಒಪ್ಪಿಗೆಯನ್ನು ಕೊಟ್ಟಿಲ್ಲ.

## Strike at the Dendeli Paper Mills

ಶ್ರೀ ವಿ. ಎಂ. ಘಾಡಿ.—ದಾಂಡೇಲಿಯಲ್ಲಿರುವ ಕಾಗದದ ಕಾರ್ಖಾನೆಯಲ್ಲಿ ಮುಷ್ಕರ ನಡೆಯುತ್ತಿದೆ. ಕಾರ್ಮಿಕರಲ್ಲದೆ, ಜನರಲ್ ಅಡ್ಮಿನಿಸ್ಟ್ರೇಷನ್ ಸ್ಟಾಫ್ ಸಹಿತ ಅದರಲ್ಲಿ ಸೇರಿ ಒಬ್ಬರೂ ಕೆಲಸಕ್ಕೆ ಹೋಗುತ್ತಿಲ್ಲ. ಪರಿಸ್ಥಿತಿ ಬಹಳ ಗಂಭೀರವಾಗಿದೆ. ಶಾಂತಿ ಭಂಗವಾಗುವ ಪರಿಸ್ಥಿತಿ ಇದ್ದರೂ ಸಂಬಂಧಪಟ್ಟ ಮಂತ್ರಿಗಳು ಲಕ್ಷ್ಯ ಕೊಟ್ಟಿಲ್ಲ. ಸರ್ಕಾರ ಅತ್ತಕಡೆ ಗಮನ ಹರಿಸಿ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಕಾಲಿಂಗ್ ಅಟೆನ್‌ಷನ್ ನೋಟೀಸ್ ಬಂದಿದೆ, ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನನ್ನದೂ ಇದೇ ವಿಚಾರದಲ್ಲಿ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಇದೆ. ಅದನ್ನು ಬೇಗ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಬೇಗ ಎಂದರೆ ಹೇಗೆ? ಒಂದು ದಿವಸಕ್ಕೆ ನಾಲ್ಕು ಕಾಲಿಂಗ್ ಅಟೆನ್‌ಷನ್ ನೋಟೀಸ್‌ಗಳನ್ನು ತೆಗೆದುಕೊಳ್ಳಲಾಗುತ್ತಿದೆ.

## Wasting money for Decorating the City Roads during Prime Minister's Visit.

ಶ್ರೀ ಕೋಣಂದೂರು ಲಿಂಗಪ್ಪ.—ಸುಂದರವಾದ ಬೆಂಗಳೂರು ರಾಜಧಾನಿಯನ್ನು ವಿರೂಪಗೊಳಿಸಿರುವುದಕ್ಕೆ ಒಂದು ಪ್ರಕರಣ ನಡೆದಿದೆ. ಪ್ರಧಾನಿಯವರು ಬೆಂಗಳೂರು ನಗರಕ್ಕೆ ಬಂದಾಗ ಬೆಂಗಳೂರಿನ ಸುಂದರವಾದ ರಸ್ತೆಗಳಲ್ಲಿ ಗುಂಡಿ ತೋಡಿಸಿ ಅವುಗಳಲ್ಲಿ ಯಾರೂ ಕೂಡ ಸಂಚಾರ ಮಾಡುವುದಕ್ಕೆ ಆಗದೆ ಇದ್ದ ಹಾಗೆ ರಾಜಧಾನಿಯನ್ನು ಕುರೂಪಗೊಳಿಸಿರುವುದು ಮಾತ್ರವಲ್ಲ ಅದನ್ನು ತುಂಬುವುದಕ್ಕೆ ಲಕ್ಷಾಂತರ ರೂಪಾಯಿ ಸಾರ್ವಜನಿಕ ಹಣ ಖರ್ಚಾಗುತ್ತದೆ. ಪ್ರಧಾನಿಯವರ ಹೆಸರಿನಲ್ಲಿ ಸಾರ್ವಜನಿಕರ ಹಣವನ್ನು ಪೋಲು ಮಾಡುತ್ತಿರುವುದನ್ನು ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್. —ಮಾನ್ಯ ಸದಸ್ಯರು ಹೇಳತಕ್ಕದ್ದು ಸರಿಯಾದುದಲ್ಲ. ಅವರು ಬೇರೆ ಪ್ರಶ್ನೆ ಕಳಿಸಿದರೆ ಉತ್ತರ ತರಿಸಿ ಹೇಳಬಹುದು. ಸಾರ್ವಜನಿಕ ಹಣವನ್ನು ಸರ್ಕಾರ ಖರ್ಚು ಮಾಡಿಲ್ಲ. Let him not give a wrong impression on these matters.

## Mysore Land Reforms (Amendment) Bill, 1973, as reported by the J.S.C. Governor's Recommendation—Announcement.

MADAM SPEAKER.—Now we will go to the next item. Motion to be moved for consideration of the Mysore Land Reforms (Amendment) Bill, 1973 as reported by the Joint Select Committee. I have to inform to the House that I have received a message from the Governor recommending for the consideration of the Mysore Land Reforms (Amendment) Bill, 1973 as reported by the Joint Select Committee. Hon. Minister for Revenue may move the motion for consideration.